<u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ,</u>

<u>ನವಲಗುಂದ</u>

**ಸಿ. ಸಿ. ನಂಃ 737/2018**

ಪಿ.ಡಬ್ಲ್ಯೂ- 4

ಸಿ.ಡಬ್ಲೂ- 7

| | | |
|---|---|---|
| ಹೆಸರು | ಃ- | ರಮೇಶ ಭದ್ರಾಪುರ |
| ತಂದೆ / ಗಂಡನ ಹೆಸರು | ಃ- | ಮಹಾದೇವಪ್ಪ |
| ವಯಾ | ಃ- | 59 ವರ್ಷ |
| ಉದ್ಯೋಗ | ಃ- | ಎಎಸ್ಐ |
| ವಾಸಸ್ಥಳ | ಃ- | ಹುಬ್ಬಳ್ಳಿ ಗ್ರಾಮೀಣ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 23-03-2026 |

*<u>ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ</u>*

ನಾನು 2015 ರಿಂದ 2020 ರವರೆಗೆ ಅಣ್ಣಿಗೇರಿ ಪೊಲೀಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ನಿರ್ವಹಿಸಿರುತ್ತೇನೆ.

1) ದಿನಾಂಕ 14-07-2018 ರಂದು ನಾನು ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಹಾಜರಾಗಿ ಸರ್ಕಾರದ ಪರವಾಗಿ ಪ್ರಥಮ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಪ್ರಥಮ ಮಾಹಿತಿಯನ್ನು ನಾನು ಸ್ವೀಕರಿಸಿ ಅದನ್ನು ನಮ್ಮ ಠಾಣಾ ಗುನ್ನಾ ಸಂಖ್ಯೆ 77/2018 ದಾಖಲು ಮಾಡಿಕೊಂಡಿರುತ್ತೇನೆ. ಸದರಿ ಪ್ರಥಮ ಮಾಹಿತಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**2** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಪ್ರಕರಣದ ಪ್ರ.ವ.ವ. ನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರ.ವ.ವ. ನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**3** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು.

2) ಆನಂತರ ಪ್ರಕರಣದ ಆರೋಪಿತನನ್ನು ದಸ್ತಗಿರಿ ನಿಯಮ ಪಾಲಿಸಿ, ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ನ್ಯಾಯಾಂಗ ಬಂದನ ಕೋರಿ ನಿವೇದಿಸಿಕೊಂಡಿರುತ್ತೇನೆ. ಚಾಸಾ-1 ರವರು ಪ್ರಕರಣದಲ್ಲಿ ಜಪ್ತು ಮಾಡಲಾದ 180 ಎಂ.ಎಲ್‌ನ ಒಟ್ಟು 30 ಒಲ್ಡ ಟ್ಯಾವರನ ವಿಸ್ಕಿ

ಟೆಟ್ರಾಪ್ಯಾಕೇಟಗಳನ್ನು ಹಾಗೂ ಒಂದು ಖಾಲಿ ಚೀಲವನ್ನು ರಾಸಾಯನಿಕ ಪರೀಕ್ಷೆಗೆಂದು ಚಾಸಾ-6 ರವರಲ್ಲಿ ದಿನಾಂಕ 28-09-2018 ರಲ್ಲಿ ಕೋರಿಕೊಂಡಿರುತ್ತೇನೆ.

3) ಆನಂತರ ದಿನಾಂಕ 01-10-2018 ರಂದು ಚಾಸಾ-6 ರವರಿಂದ ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**4** ಎಂದು ಗುರುತಿಸಲಾಯಿತು. ದಿನಾಂಕ 14-07-2018 ರಂದು ಸಾಕ್ಷಿದಾರರಾದ ಚಾಸಾ-4 ಮತ್ತು ಚಾಸಾ-5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ಕ್ರಮವಾಗಿ ನಿ.ಪಿ.**5** ಮತ್ತು ನಿ.ಪಿ.**6** ಎಂದು ಗುರುತಿಸಲಾಯಿತು.

4) ಸದರಿ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯದಾರ ಲಭ್ಯವಿದ್ದ ಕಾರಣ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಅಂತಿಮ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**7** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಆರೋಪಿ ಹಾಗೂ ಮುದ್ದೇಮಾಲು ನ್ಯಾಯಾಲದ ಎದುರಿಗೆ ಸಾಕ್ಷಿಯು ನೋಡಿ ಗುರ್ತಿಸಿರುತ್ತಾರೆ. ಮುದ್ದೇಮಾಲು ಈಗಾಗಲೇ ಮ ಮ 1 ಎಂದು ಗುರ್ತಿರ್ಸಲಾಗಿರುತ್ತದೆ.

*ಪಾಟೀಸವಾಲು ಆರೋಪಿ ಪರ ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ-*

1) ಪಂಚನಾಮೆಗೆ ಚಾಯಾಚಿತ್ರ ತೆಗೆಯಲು ತೊಂದರೆ ಇರಲಿಲ್ಲ. ಮುದ್ದೆ ಮಾಲುಗಳ ಚಾಯಾಚಿತ್ರ ತೆಗೆದಿರುವುದಿಲ್ಲ. ಚಾಸಾ-1 ರವರು ದೂರನ್ನು ಎಲ್ಲಿ ತಯಾರು ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಚಾಸಾ-4 ಮತ್ತು ಚಾಸಾ-5 ರವರ ಹೇಳಿಕೆ ಪಡೆದುಕೊಂಡ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.1 ರಂತಹ ವಸ್ತುಗಳು ಮದ್ಯದ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ. ಚಾಸಾ1 ರವರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಠಾಣೆಯ ಅಂಕೆಸಂಕೆಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

**(ನವೀನ ಎಫ್. ಡಿಸೋಜಾ)**
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**